1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (110)179
2) ಸದಸ್ಯರ ಹೆಸರು : ಶ್ರೀ ಸಂಪಂಗಿ ಎನ್
3) ಉತ್ತರಿಸುವ ಸಚಿವರು : (ಶ್ರೀ.ಮುರುಗೇಶ್ ಆರ್.ನಿರಾಣಿ)
ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ಅ. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಬಡ ರೈತರ ಜಮೀನುಗಳನ್ನು ಕೈಗಾರಿಕಾ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿರುವುದು ನಿಜವೇ ಹಾಗಿದ್ದಲ್ಲಿ ಎಷ್ಟು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಅದಕ್ಕೆ ನಿಗಧಿಗೊಳಿಸಿದ ಪರಿಹಾರದ ಮೊತ್ತವೆಷ್ಟು; (ವಿವರ ಒದಗಿಸುವುದು);

ಬಾಗೇಪಲ್ಲಿ ತಾಲ್ಲೂಕಿನ ಬಾಗೇಪಲ್ಲಿ ಮತ್ತು ಕೊಂಡರೆಡ್ಡಿಪಲ್ಲಿ ಗ್ರಾಮಗಳಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪನೆಗಾಗಿ ಒಟ್ಟು 192 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಈ ಜಮೀನಿಗೆ ಇದುವರೆವಿಗೂ ಪರಿಹಾರ ಪಾವತಿಸಲು ಭೂದರ ನಿಗದಿಗೊಳಿಸಿರುವುದಿಲ್ಲ.

ಆ. ಈವರೆವಿಗೂ ಬಡ ರೈತರಿಗೆಂದು ಸರ್ಕಾರಿ ಜಮೀನುಗಳನ್ನು ಯಾವ ಯಾವ ಭಾಗದಲ್ಲಿ ಹಂಚಿಕೆ ಮಾಡಲಾಗಿದೆ (ಹಂಚಿಕೆಯ ವಿವರ ಒದಗಿಸುವುದು) ?

ಇಲ್ಲ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ : (358) 182
2) ಸದಸ್ಯರ ಹೆಸರು : ಶ್ರೀ ಸಂಪಂಗಿ ಎನ್.
3) ಉತ್ತರಿಸುರವ ಸಚಿವರು : ಶ್ರೀ ಗೂಳಿಹಟ್ಟಿ ಡಿ.ಶೇಖರ್(ಜವಳಿ, ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು.)

ಅ) ರಾಜ್ಯದಲ್ಲಿರುವ ಕ್ರೀಡಾಪಟುಗಳಿಗೆ ಇದುವರೆವಿಗೂ ಯಾವ ಯಾವ ಪ್ರಶಸ್ತಿಯನ್ನು ಸರ್ಕಾರದ ವತಿಯಿಂದ ನೀಡಲಾಗಿದೆ (ವಿವರ ಒದಗಿಸುವುದು);

ಕರ್ನಾಟಕ ಸರ್ಕಾರದ ವತಿಯಿಂದ ರಾಜ್ಯದಲ್ಲಿರುವ ಕ್ರೀಡಾಪಟುಗಳಿಗೆ 1992 ರಿಂದ 2006ರವರೆಗೆ 288 ಏಕಲವ್ಯ ಪ್ರಶಸ್ತಿ. 2006–07ನೇ ಸಾಲಿನಲ್ಲಿ 270 ಜಿಲ್ಲಾ ಕ್ರೀಡಾ ಪ್ರಶಸ್ತಿ, 2007ನೇ ಸಾಲಿನಲ್ಲಿ 1044 ನಗದು ಪ್ರಶಸ್ತಿ ಹಾಗೂ ಒಬ್ಬರಿಗೆ ಜೀವನ ಪರ್ಯಂತ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಆ) ಗ್ರಾಮಾಂತರ ಪ್ರದೇಶದ ಕ್ರೀಡಾಪಟುಗಳಿಗೆ ಸರ್ಕಾರವು ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ (ವಿವರ ಒದಗಿಸುವುದು);

ಗ್ರಾಮಾಂತರ ಪ್ರದೇಶದ ಕ್ರೀಡಾಪಟುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.

ಪ್ರತಿ ಜಿಲ್ಲೆಯ 30 ಗ್ರಾಮೀಣ ಕ್ರೀಡಾ ಸಂಘಗಳಿಗೆ ಕ್ರೀಡಾ ಸಲಕರಣಗಳನ್ನು ಖರೀದಿಸಲು ರೂ. 5,000/– ದಂತೆ ಅನುದಾನ ಒದಗಿಸಲಾಗಿದೆ. ಆಯ್ಕೆ ಮಾಡಿದ 10 ಗ್ರಾಮೀಣ ಕ್ರೀಡಾಪಟುಗಳಿಗೆ ತಲಾ ರೂ. 5,000/– ಗಳಂತೆ ಜಿಲ್ಲಾ ಕ್ರೀಡಾ ಪ್ರಶಸ್ತಿಗಳನ್ನು ನೀಡಲಾಗಿದೆ.

ಅಖಿಲ ಭರತ ಗ್ರಾಮೀಣ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ರಾಜ್ಯದ ತಂಡಗಳಿಗೆ ಸಮವಸ್ತ್ರಗಳನ್ನು ನೀಡಲಾಗಿದೆ. ತಾಲ್ಲೂಕು ಕ್ರೀಡಾಂಗಣಗಳಲ್ಲಿ ದೈನಂದಿನ ಕ್ರೀಡಾ ತರಬೇತಿ ನೀಡಲಾಗುತ್ತಿದೆ.

2007 ಜನವರಿಯಿಂದ ರಾಜ್ಯದ 23 ಜಿಲ್ಲೆಗಳಲ್ಲಿ ಕ್ರೀಡಾಶಾಲೆಗಳನ್ನು ಪ್ರಾರಂಭಿಸಲಾಗಿದ್ದು ಒಟ್ಟು 822 ಸಂಖ್ಯೆಯ ಬಾಲಕ ಬಾಲಕಿಯರು ವ್ಯಾಸಂಗ ಮಾಡುತ್ತಿದ್ದು ಈ ಕ್ರೀಡಾಪಟುಗಳಿಗೆ ವರ್ಷದಾದ್ಯಂತ ಉಚಿತ ವಸತಿ ಹಾಗೂ ಉಚಿತ ಪೌಷ್ಟಿಕ ಊಟೋಪಹಾರದ ವ್ಯವಸ್ಥೆಯನ್ನು ವೈಜ್ಞಾನಿಕ ಕ್ರೀಡಾ ತರಬೇತಿ, ಶೈಕ್ಷಣಿಕ ವಿಷಯಗಳಲ್ಲಿ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ.

ಈ ಕ್ರೀಡಾಶಾಲೆಯಲ್ಲಿ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ 5 ರಿಂದ 7ನೇ ತರಗತಿಯ ವರೆಗೆ ವಸತಿ ಕಲ್ಪಿತ ಕ್ರೀಡಾ ಶಾಲೆಗಳಲ್ಲಿ ತಲಾ 2 ಕ್ರೀಡೆಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.

ಕ್ರೀಡಾಶಾಲೆಗೆ ಸೇರ್ಪಡೆ ಹೊಂದಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಕ್ರೀಡಾ ಸಮವಸ್ತ್ರ, ಕ್ರೀಡಾಪಟುಗಳು ಅಭ್ಯಾಸ ಮಾಡಲು ಅವಶ್ಯವಿರುವ ಕ್ರೀಡಾ ಸಲಕರಣೆಗಳು/ಉಪಕರಣಗಳನ್ನು ಎಲ್ಲಾ ಕ್ರೀಡಾಶಾಲೆಗಳಿಗೆ ಒದಗಿಸಲಾಗಿರುತ್ತದೆ.

ಹಿರಿಯ ವಿದ್ಯಾರ್ಥಿಗಳಿಗೆ (8ನೇ ತರಗತಿಯಿಂದ 10ನೇ ತರಗತಿ) ಅನುಕೂಲವಾಗುವಂತೆ ಕೂಡಿಗೆ (ಕೊಡಗು ಜಿಲ್ಲೆ) ಹಾಗೂ ವಿದ್ಯಾನಗರ (ಬೆಂಗಳೂರು ಗ್ರಾಮಾಂತರ ಜಿಲ್ಲೆ) ಗಳಲ್ಲಿ ಕ್ರೀಡಾಶಾಲೆಗಳನ್ನು ಪ್ರಾರಂಭಿಸಲಾಗಿದ್ದು, ಒಟ್ಟು 160 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು, ಇವರಲ್ಲಿ ಶೇ 80 ರಷ್ಟು ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶದಿಂದ ಆಯ್ಕೆಯಾಗಿರುತ್ತಾರೆ. ಪ್ರಥಮ ಪಿ.ಯು.ಸಿ. ಯಿಂದ ಪದವಿಯವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅನುಕೂಲವಾಗುವಂತೆ ಬೆಳಗಾವಿ (ಜುಡೋ, ಕುಸ್ತಿ), ದಾವಣಗೆರೆ (ಕುಸ್ತಿ), ಬೆಂಗಳೂರು (ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ವಾಲಿಬಾಲ್, ಫುಟ್ಬಾಲ್ ಮತ್ತು ಹಾಕಿ), ಮೈಸೂರು (ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ವಾಲಿಬಾಲ್ ಮತ್ತು ಹಾಕಿ) ಮತ್ತು ವಿಜಾಪುರ (ಸೈಕ್ಲಿಂಗ್) ಈ ಸ್ಥಳಗಳಲ್ಲಿ ಆವರಣದಲ್ಲಿ ತೋರಿಸಿರುವ ಕ್ರೀಡೆಗಳಲ್ಲಿ ಕ್ರೀಡಾ ವಸತಿ ನಿಲಯಗಳನ್ನು ನಡೆಸಲಾಗುತ್ತಿದೆ. ಈ 5 ಕ್ರೀಡಾ ವಸತಿ ನಿಲಯಗಳಲ್ಲಿ 203 ಸಂಖ್ಯೆಯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು ಈ ಪೈಕಿ ಶೇ. 75ರಷ್ಟು ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶದಿಂದ ಬಂದವರಾಗಿರುತ್ತಾರೆ.

ಇ) ಏಕಲವ್ಯ ಪ್ರಶಸ್ತಿಗಳನ್ನು ಪ್ರತಿ ವರ್ಷ ಕ್ರೀಡಾಪಟುಗಳಿಗೆ ನೀಡುತ್ತಿರುವುದು ನಿಜವೇ; ಈ ಪ್ರಶಸ್ತಿ ಪಡೆದ ಕ್ರೀಡಾಪಟುಗಳಿಗೆ ನೀಡುವ ಸರ್ಕಾರದ ಮೊತ್ತವೆಷ್ಟು ಮತ್ತು ಪ್ರಶಸ್ತಿಗೆ ವೆಚ್ಚವಾಗುವ ಹಣವೆಷ್ಟು;

ಹೌದು. ಏಕಲವ್ಯ ಪ್ರಶ್ತಿಯು ರೂ. 50,000/– ನಗದು, ಪ್ರಶಸ್ತಿ, ಸುರುಳಿ, ಕಂಚಿನ ಪ್ರತಿಮೆ ಮತ್ತು ಕ್ರೀಡಾ ಸಮವಸ್ತ್ರ ಒಳಗೊಂಡಿರುತ್ತದೆ. ಈ ಪ್ರಶಸ್ತಿ ಸಮಾರಂಭಕ್ಕೆ ರೂ. 25.00 ಲಕ್ಷಗಳ ವೆಚ್ಚವಾಗುವುದು.

ಈ) ತಾಲ್ಲೂಕು ಮಟ್ಟದಲ್ಲಿರುವ ಕ್ರೀಡಾಂಗಣಗಳು ಕ್ರೀಡಾಪಟುಗಳಿಗೆ ಎಷ್ಟು ಪ್ರಯೋಯನವಾಗುತ್ತಿದೆ ಹಾಗೂ ಈಗ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಕ್ರೀಡಾಂಗಣಗಳು ಪ್ರಾರಂಭವಾಗುವುದರ ಬಗ್ಗೆ ವಿವರ ಒದಗಿಸುವುದು?

ಪೂರ್ಣಗೊಂಡಿರುವ 35 ತಾಲ್ಲೂಕು ಕ್ರೀಡಾಂಗಣಗಳಲ್ಲಿ ಪೆವಿಲಿಯನ್ ಕಟ್ಟಡ, ಕುಡಿಯುವ ನೀರಿನ ವ್ಯವಸ್ಥೆ, 200 ಮೀ. ಅಥವಾ 400 ಮೀ. ಟ್ರಾಕ್‌ಗಳು. ಮಲ್ಟಿ ಜಿಮ್ ಸೌಲಭ್ಯ ಲಭ್ಯವಿದ್ದು, ಕ್ರೀಡಾಪಟುಗಳು ದೈನಂದಿನ ಕ್ರೀಡಾ ಚಟುವಟಿಕೆಗಳಲ್ಲದೆ ಇಲಾಖೆಯ ಮುಖಾಂತರ ನಡೆಸಲಾಗುವ ಗ್ರಾಮೀಣ ಕ್ರೀಡಾಕೂಟ, ದಸರಾ ಕ್ರೀಡಾಕೂಟ ಮತ್ತು ಅಂತರ ಯುವಕ ಸಂಘಗಳ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಕ್ರೀಡಾಂಗಣಗಳ ಉಪಯೋಗವನ್ನು ಪಡೆಯುತ್ತಿಲಿದ್ದಾರೆ. 57 ಕ್ರೀಡಾಂಗಣಗಳ ನಿರ್ಮಾಣ ಕಾರ್ಯ ವಿವಿಧ ಹಂತಗಳಲ್ಲಿರುತ್ತವೆ. 15 ತಾಲ್ಲೂಕು ಕ್ರೀಡಾಂಗಣಗಳನ್ನು 31–03–2009ರ ಒಳಗೆ ಪೂರ್ಣಗೊಳಿಸಲು ಕ್ರಮ ರೂಪಿಸಲಾಗಿದೆ.

ಕೊಡಗು, ಚಿಕ್ಕಮಗಳೂರು ಮತ್ತು ರಾಯಚೂರು ಜಿಲ್ಲಾ ಕ್ರೀಡಾಂಗಣಗಳನ್ನು 12ನೇ ಹಣಕಾಸು ಆಯೋಗದ ಅನುದಾನದಡಿ ಉನ್ನತೀಕರಿಸಲಾಗುತ್ತಿದೆ.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **(113)183**

: (ಶ್ರೀ ಜಿ.ಕರುಣಾಕರ ರೆಡ್ಡಿ)

**ವಿಧಾನಸಭೆ ಸದಸ್ಯರ ಹೆಸರು** : **ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು)**

**ವಿಷಯ** : **ರೈತರ ಪಹಣಿಗಳ ತಿದ್ದುಪಡಿಯು ವಿಳಂಬವಾಗುತ್ತಿರುವುದು**

ಅ ರೈತರ ಭೂಮಿಗಳ ಪಹಣಿಗಳ ತಿದ್ದುಪಡಿ ಅಧಿಕಾರ ತಹಶೀಲ್ದಾರ್‌ರಿಂದ ಉಪವಿಭಾಗಾಧಿಕಾರಿಗಳಿಗೆ ವರ್ಗಾಯಿಸಿರುವುದರಿಂದ ತಿದ್ದುಪಡಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕೆಲವು ಕಡೆ ಉಪ ವಿಭಾಗಧಿಕಾರಿಗಳು ಪಹಣಿಗಳ ತಿದ್ದುಪಡಿ ಮಾಡಲು ಸ್ವಲ್ಪ ವಿಳಂಬವಾಗುತ್ತಿದೆ.